ಕೇಳಿದ್ದಾರೆ. ಶಾಲಾ ಕೊರತೆ ಬಗ್ಗೆ ಕೇಳಿದ್ದಾರೆ. ಮಾನ್ಯ ಸಚಿವರು ದಯಮಾಡಿ 40 ಶಾಲೆಗಳಲ್ಲಿ ಒಬ್ಬರು ಶಿಕ್ಷಕರು ಇಲ್ಲವೆಂದಾಗ ಅದರ ಕಡೆ ಗಮನಹರಿಸಿ Report ತೆಗೆದುಕೊಂಡು ನೇಮಕಾತಿ ಮಾಡಲಾಗುವುದು ಎಂದು ಹೇಳುವುದಕ್ಕೂ ತಾವು ಯೋಚನೆ ಮಾಡುತ್ತೀರಿ ಎಂದರೆ ಏನರ್ಥ ?

**ಶ್ರೀ ಕಿಮ್ಮನೆ ರತ್ನಾಕರ್:** ಯೋಚನೆ ಮಾಡಲಿಲ್ಲ. ಈಗಾಗಲೇ ಮಾನ್ಯ ತುಕಾರಾಂ ರವರು ಪ್ರಶ್ನೆ ಕೇಳಿದಾಗ ಇದಕ್ಕೆ ಸಂಬಂಧಿಸಿದಂತೆ ಸಮಗ್ರವಾದಂತಹ ಉತ್ತರ ಕೊಟ್ಟಿದ್ದೆ. ಅದರೊಳಗೆ ಇದು ಅಡಗಿದೆ ಎಂದು ನಾನು ಹೇಳಿದೆ. ಎಲ್ಲಿ ಅಂತಹ ಶಾಲೆಗಳು ಇವೆ ಅಲ್ಲಿ ಖಂಡಿತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಅಧ್ಯಕ್ಷರು :** ಆಯಿತು. ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡುವುದು.

**ವಿದ್ಯಾರ್ಥಿಗಳ ಮೂಲಭೂತ ಸೌಕರ್ಯ**

**44(332) : ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ) :–** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದ ಪಟ್ಟಣ ಪ್ರದೇಶಗಳಲ್ಲಿನ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರುಗಳಿಗೆ ವಿಶೇಷವಾಗಿ ಹೆಣ್ಣು ಮಕ್ಕಳ ಗೌರವ ದೃಷ್ಟಿಯಿಂದ ಅಗತ್ಯವಿರುವ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ನಿರ್ಮಾಣ ವ್ಯವಸ್ಥೆ, ನೈರ್ಮಲೀಕರಣ ಪೂರ್ಣ ವ್ಯವಸ್ಥೆಯನ್ನು ಸ್ಥಳೀಯ ಪೌರ ಸಂಸ್ಥೆಗಳಿಗೆ ವಹಿಸಲು ಸರ್ಕಾರ ನಿರ್ಧರಿಸಿದೆಯೇ;

(ಆ) ಇಲ್ಲದಿದ್ದಲ್ಲಿ, ಸದರಿ ವ್ಯವಸ್ಥೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಇರುವ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಸ್ಥಳೀಯ ಪೌರ ಸಂಸ್ಥೆಗಳಿಗೆ ವಹಿಸಿದ್ದಲ್ಲಿ, ಅದಕ್ಕೆ ತಗಲುವ ಅಂದಾಜು ಮೊತ್ತವೆಷ್ಟು ?

**ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :–**

(ಅ) ಇಲ್ಲ.

(ಆ) 2014–15 ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆಗೆ ರೂ.4.00 ಕೋಟಿಗಳನ್ನು ಆಯವ್ಯಯದಲ್ಲಿ ಹಂಚಿಕೆ ಮಾಡಲಾಗಿದೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕುಡಿಯುವ

ನೀರಿನ ವ್ಯವಸ್ಥೆ ಮತ್ತು ಶೌಚಾಲಯ ನಿರ್ವಹಣೆಗೆ ರೂ. 112.95 ಕೋಟಿ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ ಒದಗಿಸಲು ಮತ್ತು ನಿರ್ವಹಿಸಲು ರೂ. 77.18 ಕೋಟಿ ಅನುದಾನದ ಅಗತ್ಯತೆ ಇದೆ. ಈ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಅನುದಾನಕ್ಕೆ ಅಗತ್ಯವಿರುವ ಕಡೆ ಅನುಮೋದಿತ ಕ್ರಿಯಾಯೋಜನೆ ಅನುಸಾರ ಕ್ರಮ ವಹಿಸಲಾಗುತ್ತದೆ. ಮೇಲ್ಕಂಡಂತೆ ಹೆಚ್ಚುವರಿ ಬೇಡಿಕೆ ಇದ್ದು ರೂ. 147.00 ಕೋಟಿಗಳನ್ನು ಹೆಚ್ಚುವರಿಯಾಗಿ ಒದಗಿಸಲು ಆರ್ಥಿಕ ಇಲಾಖೆಯನ್ನು ಕೋರಲಾಗಿದ್ದು ಒದಗಿಸಿದ ತಕ್ಷಣ ಬೇಡಿಕೆಯ ಪಟ್ಟಿಯಂತೆ ಆದ್ಯತೆಯ ಮೇರೆಗೆ ಬಿಡುಗಡೆ ಮಾಡಲಾಗುವುದು .

(ಇ) ಅನ್ವಯಿಸುವುದಿಲ್ಲ.

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ,**

**ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–560 001**

**ಯೋ8 /ಪಂ ಸೌ ಕು ನಿ ಶಾ/ನಿ/ ಅನು /01/2013–14 ದಿನಾಂಕ:04–06–2014**

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**

**ಶಿಕ್ಷಣ ಇಲಾಖೆ, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)**

**ಬಹುಮಹಡಿಗಳ ಕಟ್ಟಡ,**

**ಬೆಂಗಳೂರು.**

ವಿಷಯ: 2013–14ನೇ ಸಾಲಿಗೆ ರಾಜ್ಯವಲಯ ಮುಂದುವರೆದ ಯೋಜನೆಯ ಪಂಚ ಸೌಲಭ್ಯದಡಿ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆಗಾಗಿ ಪ್ರಥಮ ತ್ರೈಮಾಸಿಕದಲ್ಲಿ ಅನುದಾನ ಬಿಡುಗಡೆ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಇಡಿ 101 ಯೋಯೋಕ 2014, ಬೆಂಗಳೂರು. ದಿ:25–4–2014.

2.ಸರ್ಕಾರದ ಪತ್ರ ಸಂಖ್ಯೆ: ಇಡಿ130ಯೋನಕ 2014 ದಿ : 29–05–2014.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಕುಡಿಯುವ ನೀರು ಪೂರೈಕೆ ಮತ್ತು ಶೌಚಾಲಯವನ್ನು ನಿರ್ಮಿಸಲಾಗಿದ್ದು 2013–14ನೇ ಸಾಲಿನಲ್ಲಿನ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆಗೆ ಈಗಾಗಲೇ ಹಣ ಬಿಡುಗಡೆ ಮಾಡಲಾಗಿದೆ. 2013–14 ನೇ ಸಾಲಿನಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ರಾಜ್ಯ ಸರ್ಕಾರವು ಯೋಜನೆ ಲೆಕ್ಕ ಶೀರ್ಷಿಕೆ : 2202–01–053–0–2–059 ರಡಿ ರೂ. 120.00 ಲಕ್ಷ, 133ರಡಿ ರೂ. 400.00 ಲಕ್ಷ, 422 ರಡಿ ರೂ. 170.00 ಲಕ್ಷ ಮತ್ತು 423 ರಡಿ ರೂ. 76.89 ಲಕ್ಷ ಒಟ್ಟು ರೂ. 766.89 ಲಕ್ಷಗಳನ್ನು ಸದರಿ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಒದಗಿಸಿದೆ. ಸದರಿ ಅನುದಾನದಲ್ಲಿ ಪ್ರಥಮ ತ್ರೈಮಾಸಿಕವಾಗಿ ಲೆಕ್ಕ ಶೀರ್ಷಿಕೆ 2202–01–053–0–02–059, 133, 422, 423 ರಡಿ ಬಿಡುಗಡೆಯಾಗಿರುವ ಅನುದಾನದಲ್ಲಿ ಎಲ್ಲಾ ಜಿಲ್ಲೆಗಳಿಗೂ ಶಾಲೆಗಳ ಸಂಖ್ಯೆಗೆ ಅನುಗುಣವಾಗಿ ಪೂರ್ಣ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ.

2014–15 ನೇ ಸಾಲಿಗೆ ಸದರಿ ಯೋಜನೆಗೆ ಲೆಕ್ಕ ಶೀರ್ಷಿಕೆ: 2202–01–053–0––02– 135ರಡಿ ರೂ. 147.72 ಲಕ್ಷ 136 ರಡಿ ರೂ. 92.28 ಲಕ್ಷ ಮತ್ತು 186ರಡಿ ರೂ. 160–00 ಲಕ್ಷ ಬಿಡುಗಡೆಯಾಗಿದ್ದು ಈಗಾಗಲೇ ಕ್ರಿಯಾ ಯೋಜನೆ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಉಲ್ಲೇಖ–2 ರ ಪತ್ರದಲ್ಲಿ ಹೆಚ್ಚುವರಿಯಾಗಿ ರೂ. 147.00 ಲಕ್ಷ ಗಳಿಗೆ ಪ್ರತಿ ಶಾಲೆಗೆ ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆಗೆ ಅಂದರೆ ಕಿರಿಯ ಪ್ರಾಥಮಿಕ ಶಾಲೆಗೆ 25ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಲ್ಲಿ ವಾರ್ಷಿಕ ರೂ. 12.000.00, 26ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ ರೂ. 16.000.00, ಹಿರಿಯ ಪಾಥಮಿಕ ಶಾಲೆಗೆ 125 ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಲ್ಲಿ ರೂ. 24.000.00, 126ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ ರೂ. 32.000.00, 251 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ ರೂ. 40.000.00, ಪ್ರೌಢಶಾಲೆಗೆ 200ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಲ್ಲಿ ರೂ. 32.000.00, 201ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ

ರೂ. 40.000.00, 401ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ ರೂ. 52.000.00, ರಂತೆ ಲೆಕ್ಕಾಚಾರ ಮಾಡಿ ಅನುಬಂಧ–1ರಲ್ಲಿ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿದೆ.

| ಕ್ರ.ಸಂ. | ಮಕ್ಕಳ ಸಂಖ್ಯೆ | ಶಾಲೆಗಳ ಸಂಖ್ಯೆ | ವಾರ್ಷಿಕ ಪ್ರತಿ ಶಾಲೆಗೆ ನಿಗದಿಪಡಿಸಿದ ಮೊತ್ತ | ಒಟ್ಟು ಮೊತ್ತ |
|---|---|---|---|---|
| 1 | 25ರ ವರೆಗಿನ | 10,780 | 12,000–00 | 12,93,60,000–00 |
| 2 | 26ಕ್ಕಿಂತ ಹೆಚ್ಚು | 11,325 | 16,000–00 | 18,12,00,000–00 |
| 3 | 125 ರವರೆಗೆ | 11,334 | 24,000–00 | 27,20,16,000–00 |
| 4 | 250 ರವರೆಗೆ | 7,422 | 32,000–00 | 23,75,04,000–00 |
| 5 | 251 ಕ್ಕಿಂತ ಹೆಚ್ಚು | 3,811 | 40,000–00 | 15,24,40,000–00 |
| 6 | 200ರ ವರೆಗೆ | 3,037 | 32,000–00 | 9,71,84,000–00 |
| 7 | 201 ರಿಂದ 400ರವರೆಗೆ | 1,108 | 40,000–00 | 4,43,20,000–00 |
| 8 | 401ಕ್ಕಿಂತ ಹೆಚ್ಚು | 297 | 52,000–00 | 1,54,44,000–00 |
| | | | ಒಟ್ಟು ಮೊತ್ತ | **112,94,68,000–00** |

ಸದರಿ ಯೋಜನೆಗೆ ಹೆಚ್ಚುವರಿಯಾಗಿ ಒಟ್ಟು ರೂ. 112,94,68000.00 ಗಳನ್ನು ಬಿಡುಗಡೆ ಮಾಡಿ ಆದೇಶ ಹೊರಡಿಸಲು ಕೋರಿದೆ.

Action Plan to Provide Toilets in 2014-15

| Sl.No | District | GLPS | | | | GHPS | | | | | | | | GHS | | | | Total Amount |
|---|---|---|---|---|---|---|---|---|---|---|---|---|---|---|---|---|---|---|
| | | Below 25 | | Above 25 | | Below 125 | | Above 126-350 | | Above 351 | | Below 200 | | Above 201-400 | | Above 401 | | |
| | | No. of Schools | Amount Per Sch Rs.120000 | No. of Schools | Amount Per Sch Rs.160000 | No. of Schools | Amount Per Sch Rs.240000 | No. of Schools | Amount Per Sch Rs.320000 | No. of Schools | Amount Per Sch Rs.400000 | No. of Schools | Amount Per Sch Rs.200000 | No. of Schools | Amount Per Sch Rs.400000 | No. of Schools | Amount Per Sch Rs.520000 | |
| 1 | BAGALKOT | 39 | 1168000 | 360 | 5240000 | 221 | 5304000 | 341 | 10912000 | 281 | 10440000 | 107 | 3424000 | 39 | 1560000 | 11 | 572000 | 30640000 |
| 2 | BANGALORE RURAL | 447 | 5364000 | 224 | 3744000 | 348 | 8352000 | 67 | 2144000 | 24 | 960000 | 33 | 1056000 | 20 | 800000 | 9 | 468000 | 22868000 |
| 3 | BANGALORE U NORTH | 86 | 1088000 | 165 | 2480000 | 104 | 2496000 | 78 | 2496000 | 79 | 3160000 | 25 | 800000 | 15 | 600000 | 14 | 728000 | 13328000 |
| 4 | BANGALORE U SOUTH | 137 | 1644000 | 208 | 4768000 | 192 | 4368000 | 157 | 6024000 | 111 | 4440000 | 34 | 1088000 | 34 | 1360000 | 12 | 624000 | 23316000 |
| 5 | BELGAUM | 264 | 3048000 | 362 | 8632000 | 257 | 6168000 | 327 | 10464000 | 233 | 9320000 | 87 | 2784000 | 32 | 1280000 | 7 | 364000 | 39960000 |
| 6 | BELGAUM GHKKODI | 332 | 2784000 | 545 | 8720000 | 389 | 8856000 | 439 | 14048000 | 248 | 9840000 | 88 | 2816000 | 50 | 2320000 | 12 | 624000 | 51840000 |
| 7 | BELLARY | 84 | 1128000 | 421 | 8864000 | 376 | 4200000 | 328 | 10496000 | 332 | 13280000 | 84 | 3008000 | 51 | 2040000 | 10 | 832000 | 41840000 |
| 8 | BIDAR | 105 | 1680000 | 372 | 5952000 | 234 | 5616000 | 359 | 11488000 | 138 | 5520000 | 110 | 3520000 | 40 | 1600000 | 8 | 312000 | 35698000 |
| 9 | BIJAPUR | 228 | 2712000 | 605 | 9680000 | 239 | 5736000 | 473 | 15136000 | 339 | 13560000 | 103 | 3296000 | 30 | 1200000 | 4 | 208000 | 61628000 |
| 10 | CHAMARAJANAGARA | 165 | 2016000 | 183 | 2928000 | 211 | 5064000 | 152 | 4864000 | 49 | 1960000 | 85 | 1696000 | 23 | 920000 | 6 | 312000 | 19760000 |
| 11 | CHIKKABALLAPURA | 581 | 6972000 | 303 | 4848000 | 383 | 9312000 | 103 | 3296000 | 44 | 1760000 | 59 | 1888000 | 38 | 1520000 | 10 | 520000 | 31656000 |
| 12 | CHIKKAMANGALORE | 585 | 6660000 | 193 | 3088000 | 504 | 13536000 | 107 | 3424000 | 11 | 440000 | 87 | 2784000 | 16 | 640000 | 13 | 676000 | 31248000 |
| 13 | CHITRADURGA | 443 | 5316000 | 376 | 6016000 | 516 | 12384000 | 289 | 9248000 | 62 | 2480000 | 82 | 2624000 | 20 | 800000 | 9 | 468000 | 38912000 |
| 14 | DAKSHINA KANNADA | 123 | 1476000 | 153 | 2448000 | 364 | 8496000 | 221 | 7072000 | 78 | 3120000 | 112 | 3584000 | 40 | 1600000 | 9 | 468000 | 28864000 |
| 15 | DAVANAGERE | 246 | 2952000 | 404 | 6464000 | 304 | 7296000 | 311 | 9952000 | 89 | 3560000 | 107 | 3424000 | 38 | 1520000 | 11 | 572000 | 35740000 |
| 16 | DHARWAD | 80 | 720000 | 103 | 2600000 | 109 | 2616000 | 259 | 8192000 | 160 | 7200000 | 67 | 2144000 | 32 | 1280000 | 2 | 104000 | 24864000 |
| 17 | GADAG | 27 | 324000 | 151 | 2416000 | 110 | 2640000 | 214 | 6848000 | 114 | 4560000 | 80 | 2848000 | 16 | 640000 | 3 | 156000 | 20432000 |
| 18 | GULBARGA | 188 | 2256000 | 611 | 9776000 | 273 | 6552000 | 445 | 14240000 | 285 | 11400000 | 200 | 6400000 | 58 | 2320000 | 5 | 260000 | 53204000 |
| 19 | HASSAN | 1,048 | 12576000 | 342 | 5472000 | 865 | 21240000 | 108 | 3392000 | 7 | 280000 | 182 | 5144000 | 40 | 1600000 | 8 | 416000 | 51120000 |
| 20 | HAVERI | 123 | 1476000 | 335 | 5360000 | 227 | 5304000 | 341 | 10912000 | 143 | 5720000 | 102 | 3264000 | 28 | 1120000 | 6 | 312000 | 33468000 |
| 21 | KODAGU | 85 | 1140000 | 45 | 720000 | 168 | 4512000 | 62 | 1984000 | 13 | 520000 | 33 | 1056000 | 13 | 520000 | 1 | 52000 | 10584000 |
| 22 | KOLAR | 667 | 8244000 | 548 | 8768000 | 482 | 11568000 | 113 | 3616000 | 35 | 1400000 | 65 | 2080000 | 37 | 1480000 | 16 | 936000 | 38092000 |
| 23 | KOPPAL | 66 | 780000 | 328 | 5248000 | 97 | 2328000 | 283 | 9416000 | 211 | 8440000 | 101 | 3232000 | 30 | 1200000 | 12 | 624000 | 30824000 |
| 24 | MANDYA | 505 | 7140000 | 322 | 6152000 | 643 | 15432000 | 166 | 5280000 | 19 | 760000 | 155 | 4960000 | 53 | 2120000 | 5 | 260000 | 41104000 |
| 25 | MYSORE | 392 | 4704000 | 575 | 9168000 | 509 | 12216000 | 338 | 10816000 | 114 | 4560000 | 126 | 4032000 | 75 | 3000000 | 23 | 1196000 | 49982000 |
| 26 | RAICHUR | 426 | 5112000 | 328 | 6216000 | 377 | 9048000 | 136 | 4352000 | 22 | 880000 | 65 | 2112000 | 20 | 800000 | 8 | 416000 | 27956000 |
| 27 | UDUPI | 134 | 1608000 | 116 | 1840000 | 238 | 5712000 | 107 | 3424000 | 10 | 720000 | 74 | 2368000 | 23 | 920000 | 9 | 468000 | 17058000 |
| 28 | UTTARA KANNADA | 354 | 4248000 | 135 | 2160000 | 415 | 9960000 | 63 | 2016000 | 7 | 280000 | 34 | 1088000 | 14 | 560000 | 1 | 52000 | 20384000 |
| 29 | UTTARA KANNADA SIRSI | 432 | 5184000 | 203 | 3248000 | 394 | 9456000 | 78 | 2432000 | 40 | 1600000 | 48 | 1536000 | 19 | 760000 | 6 | 312000 | 24652000 |
| 30 | YADAGIRI | 64 | 648000 | 410 | 6560000 | 79 | 1896000 | 197 | 6304000 | 103 | 7720000 | 93 | 2976000 | 22 | 880000 | 4 | 208000 | 27192000 |
| | Total | 10,760 | 129360000 | 11,225 | 181200000 | 11,334 | 272016000 | 7,422 | 237504000 | 3,811 | 152440000 | 3,037 | 97184000 | 1,108 | 44320000 | 287 | 15444000 | 1129488000 |

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, ನಂ.೧೮, ಇನ್ಫೆಂಟ್ರಿ ರಸ್ತೆ, ಬಹ್ಮಿಲ್ಲರು, ಬೆಂಗಳೂರು-೫೨.

ಸಂಖ್ಯೆ: ಪಿಯು೨/ಕಟ್ಟಡ-೦೩/ಯೋಜನೆ-೦೪/ಆಪಶಿ-೦೧/೨೦೧೪-೧೫. ದಿನಾಂಕ: ೧೭-೦೬-೨೦೧೪.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ,
ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ,
ಬೆಂಗಳೂರು.

ಮಾನ್ಯರೆ,

ವಿಷಯ: ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅವಶ್ಯವಿರುವ ಮೂಲಭೂತ ಸೌಕರ್ಯಗಳಿಗೆ ಅನುದಾನ ಕೋರಿ ಸಲ್ಲಿಸುತ್ತಿರುವ ಪ್ರಸ್ತಾವನೆ.

ಉಲ್ಲೇಖ: ಶ್ರೀ ಐ ಎಫ್ ಮಾಗಿ, ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ ಸರ್ಕಾರದ ಅವೀನ ಕಾರ್ಯದರ್ಶಿಗಳು ಇವರ ದೂರವಾಣಿ.

* * *

ರಾಜ್ಯಾದ್ಯಂತ 1203 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಆಸ್ತಿತ್ವದಲ್ಲಿರುತ್ತವೆ. ಬಹುತೇಕ ಕಾಲೇಜುಗಳು ಸ್ವಂತ ಕಟ್ಟಡವಿಲ್ಲದೆ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲಾ ಮತ್ತು ಇತರೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಕಾಲೇಜುಗಳಿಗೆ ರಾಜ್ಯ ಸರ್ಕಾರವು ಹಂತ ಹಂತವಾಗಿ ವಿವಿಧ ಯೋಜನೆಗಳಡಿ ಜಂಟರ ನಬಾರ್ಡ್ ಸಹಯೋಗದ ಆರ್‌ಐಡಿಎಫ್ ಯೋಜನೆಯಡಿ ಹಾಗೂ ಅವೆಂಡಿಕ್ಸ್-೫ ಯೋಜನೆಗಳಡಿ ಮೂಲಭೂತ ಸೌಕರ್ಯಗಳಾದ ತರಗತಿ ಕೊಠಡಿಗಳು, ಗ್ರಂಥಾಲಯ, ಪ್ರಯೋಗಾಲಯ, ಶೌಚಾಲಯ, ಕುಡಿಯುವ ನೀರು ಮತ್ತು ಕಾಂಪೌಂಡ್‌ಗಳನ್ನು ಒದಗಿಸುತ್ತಾ ಬಂದಿರುತ್ತದೆ. ಆದಾಗ್ಯೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಸ್ವಂತ ಕಟ್ಟಡಗಳ ಸಮೀಕ್ಷೆ ಮಂಜೂರಾಗಿಲ್ಲವಾದ್ದರಿಂದ ಹಾಗು ಪ್ರತೀ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿರುವ ಕಾರಣ ಇಲ್ಲಿಯ ತನಕ ಒದಗಿಸಿರುವ ಮೂಲಭೂತ ಸೌಲಭ್ಯಗಳು ಅವಶ್ಯಕತೆಗೆ ಅನುಗುಣವಾಗಿರುವುದಿಲ್ಲ.

ರಾಜ್ಯದಲ್ಲಿ ನಡೆಯುತ್ತಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಕನಿಷ್ಠ ಪ್ರಮಾಣದ ಕಟ್ಟಡ/ಕೊಠಡಿ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಹೊಂದುವ ಕುರಿತಂತೆ ಅವಶ್ಯಕತೆವಿರುವ ವಿವರಗಳನ್ನು ಜಿಲ್ಲಾ ಉಪನಿರ್ದೇಶಕರಿಂದ ಪಡೆಯಲಾಯಿತು. ಸದರಿ ಮಾಹಿತಿಯನ್ನು ಕ್ರೋಢೀಕರಿಸಿದಾಗ ಅಂದಾಜು ಒಟ್ಟಾರೆ 1,31,459.75 ಲಕ್ಷರೂಪಾಯಿಗಳನ್ನು (ಒಂದು ಲಕ್ಷದ ಮೂವತ್ತೊಂದು ಸಾವಿರದ ನಾಲ್ಕು ನೂರಾ ಐವತ್ತೊಂಬತ್ತು ಲಕ್ಷ ಮತ್ತು ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)ಗಳ ಅವಶ್ಯಕತೆಯಿರುತ್ತದೆ. ಸದರಿ ಮೊತ್ತವನ್ನು ಇಲಾಖಾ ಲೆಕ್ಕ ಶೀರ್ಷಿಕೆ 4202-01-203-1-07-386 (ಯೋಜನೆ) ಅಡಿಯಲ್ಲಿ ಒದಗಿಸಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಕನಿಷ್ಠ ಪ್ರಮಾಣದ ಮೂಲಭೂತ ಸೌಕರ್ಯಗಳೊಂದಿಗೆ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡುವಂತೆ ಕಾಲೇಜುವಾರು ವಿಧಾನ ಸಭಾ ಕ್ಷೇತ್ರವಾರು ಮತ್ತು ಜಿಲ್ಲಾವಾರು ವಿವರಗಳೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ದಿನಾಂಕ: 31-05-2013ರಲ್ಲಿ ಸಲ್ಲಿಸಲಾಗಿತ್ತು.

ಮೇಲ್ಕಂಡ ಸಲ್ಲಿಸಲಾಗಿದ್ದ ಪ್ರಸ್ತಾವನೆಗೆ ಯಾವುದೇ ಮಂಜೂರಾತಿ ಇನ್ನೂ ದೊರಕಿಲ್ಲವಾದ್ದರಿಂದ ಹಾಗೂ ಕಾಲೇಜುಗಳಿಂದ ಕೊಠಡಿಗಳ ಪತ್ರ ಬರುತ್ತಿರುವ ಹಿನ್ನೆಲೆಯಲ್ಲಿ ಕಳಕಂಡಂತೆ ಕೋರಿಕೆಯನ್ನು ಸಲ್ಲಿಸಲಾಗುತ್ತಿದೆ.

| | |
|---|---|
| | ವಿದ್ಯಾರ್ಥಿನಿಯರ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಕುಡಿಯುವ ನೀರು [illegible] ಶೌಚಾಲಯಗಳನ್ನು ನಿರ್ಮಿಸಲು ಅವಶ್ಯಕವಿರುವ ಅನುದಾನ |
| 2. | 50,000 ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಜಿಲ್ಲಾ ಕೇಂದ್ರಗಳಲ್ಲಿ [illegible] ಸ್ಥಾಪಿತವಾಗಿದ್ದು ಆರ್‌ಐಡಿಎಫ್ ಯೋಜನೆಗಳಿಗೆ ಒಳಪಡಿಸಲಾಗದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅತ್ಯವಶ್ಯಕವಾಗಿ ಬೇಕಾಗಿರುವ ಹೆಚ್ಚುವರಿ ಕೊಠಡಿಗಳು, ಪ್ರಯೋಗಾಲಯ, ಶೌಚಾಲಯ ಇತರೆ ಮೂಲ ಸೌಕರ್ಯ ಒದಗಿಸಲು |
| 3. | ಶಿಥಿಲಾವಸ್ಥೆಯಲ್ಲಿರುವ ಹಾಗೂ ತುರ್ತಾಗಿ ದುರಸ್ತಿ ಮಾಡಬೇಕಾಗಿರುವ 75.00 ಕೋಟಿರೂಗಳು ಕಾಲೇಜುಗಳ ಕಟ್ಟಡದ ದುರಸ್ತಿ ಕಾರ್ಯಕ್ಕಾಗಿ |
| 4. | ವಿಜ್ಞಾನ ಪದವಿ ಪೂರ್ವ ಕಾಲೇಜುಗಳಿಗೆ ಪ್ರಯೋಗಾಲಯ ಕೊಠಡಿಗಳನ್ನು 26.00 ಕೋಟಿರೂಗಳಲ್ಲಿ ನಿರ್ಮಿಸುವ ಸಂಬಂಧ ಅವಶ್ಯವಿರುವ ಅನುದಾನ |
| 5. | ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪಾಳಿಪದ್ಧತಿಯಲ್ಲಿ 230.00 ಕೋಟಿರೂಗಳ ನಡೆಯುತ್ತಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಪ್ರತ್ಯೇಕ ಕಟ್ಟಡ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸುವ ಸಂಬಂಧ ಅಂದಾಜು. |

ಈ ರೀತಿಯಾಗಿ 766.18 ಕೋಟಿರೂಗಳ ಅವಶ್ಯಕವಿರುವ ಅನುದಾನವನ್ನು ಲೆಕ್ಕಶೀರ್ಷಿಕೆ 4202-01-203-1-07-3886 (ಯೋಜನೆ) ಅಡಿಯಲ್ಲಿ ಒದಗಿಸಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಕನಿಷ್ಠ ಪ್ರಮಾಣದ ಮೂಲಭೂತ ಸೌಕರ್ಯಗಳೊಂದಿಗೆ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡುವಂತೆ ಈ ಮೂಲಕ ವಿನಂತಿಸಿದೆ.

**ಶ್ರೀ ಕೆ.ಆರ್. ರಮೇಶ್ ಕುಮಾರ್ :** ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ಉತ್ತರ ಕೇಳುವುದಿಲ್ಲ. ತಮ್ಮಲ್ಲಿಯೇ ನಿವೇದಿಸಿಕೊಳ್ಳುತ್ತೇನೆ. ಬೇಡಿಕೆ ಇರುವುದು 189 ಕೋಟಿ ರೂ.ಗಳು ಬಿಡುಗಡೆಯಾಗಿರುವುದು 4 ಕೋಟಿ ರೂ.ಗಳು. ಅಂಗನವಾಡಿಗಳಿಗೆ ಸಂಬಂಧಿಸಿದಂತೆ ಕೇಳಿದಂತಹ ಪ್ರಶ್ನೆ, ಮಾನ್ಯ ಪುಟ್ಟಣ್ಣಯ್ಯನವರು ಕೇಳಿದ ಪ್ರಶ್ನೆ, ನನ್ನ ಪ್ರಶ್ನೆ, ಎಲ್ಲವೂ ಒಂದೇ ರೀತಿಯದ್ದು, ಅಂಗನವಾಡಿಯಲ್ಲಿ ಮರದ ಕೆಳಗೆ ಮಕ್ಕಳು, ಪ್ರಾಥಮಿಕ ಶಾಲೆಯಲ್ಲಿ, ಪ್ರೌಢಶಾಲೆಯಲ್ಲಿ ನೀರು ಇಲ್ಲ, ಶೌಚಾಲಯವೂ ಇಲ್ಲ. ಮಕ್ಕಳು ಅಲ್ಲಿಗೆ ಹೇಗೆ ಹೋಗುತ್ತಾರೆ? ಅಲ್ಲಿರುವಂಥವರು ಬಡವರ ಮಕ್ಕಳು, ಸಾಹುಕಾರರ ಮಕ್ಕಳೆಲ್ಲಾ convent ಗೆ ಹೋಗುತ್ತಾರೆ. ಇವರಿಗೆ ಅಲ್ಲಿಗೆ ಬಿಡುಗಡೆ ಮಾಡಲು ಹಣ ಇಲ್ಲ. ಇಡೀ ನೀತಿಯೇ ತಪ್ಪು.

ನೀವು ಪ್ರಾಥಮಿಕ ಶಿಕ್ಷಣಕ್ಕೆ ಕೊಡುತ್ತಿರುವಂತಹ ಆದ್ಯತೆ ಇದೆಯಲ್ಲಾ ಅದೇ ತಪ್ಪಾಗಿದೆ. ಈ ಸಮಾಜದಲ್ಲಿ ಯಾವ ಭಾಗದ ಜನರು ಹೆಚ್ಚಾಗಿದ್ದಾರೆ. ನೀವು ಅವರು

ಹೇಗೆ Privte School ಗಳಿಗೆ ಹೋಗುವುದು ಅನಿವಾರ್ಯ ಮಾಡುತ್ತಿದ್ದೀರೆಂದು ಗೊತ್ತಾಗುತ್ತದೆ. ನೀವೇನು ಸ್ಕೂಲ್‌ಗಳನ್ನು ಮುಚ್ಚಬೇಕಾಗಿಲ್ಲ, ಕಟ್ಟಡ ಕೊಡುವುದಿಲ್ಲ, ಬೆಂಚು ಕೊಡುವುದಿಲ್ಲ, ಪಾಠವನ್ನು ಮಾಡಿಸುವುದಿಲ್ಲ, ನೀರು ಕೊಡುವುದಿಲ್ಲ, ಶೌಚಾಲಯವನ್ನು ಕೊಡುವುದಿಲ್ಲ, ಶಾಲೆಗಳಿಗೆ ಬನ್ನಿ ಮಕ್ಕಳೆ ಎಂದರೆ ಯಾರು ಬರುತ್ತಾರೆ? ನೀವು ಶಾಲೆಗಳನ್ನು ಮುಚ್ಚಿ ಎಂದು ಹೇಳಲೇಬೇಕಾಗಿಲ್ಲ, ಪಾಪ ನಿಮಗೆ ಆ ಶ್ರಮವೇ ಇಲ್ಲ. ಆ ಶಾಲೆಗಳು ತಾನಾಗಿಯೇ ಮುಚ್ಚಿಕೊಂಡು ಹೋಗುತ್ತದೆ.

**ಅಧ್ಯಕ್ಷರು :** ತಾವು ಏನು ಮಾಡಬೇಕೆಂದು ಹೇಳಿ.

**ಶ್ರೀ ಕೆ.ಆರ್. ರಮೇಶ್ ಕುಮಾರ್ :** ಇದಕ್ಕೆ ತಾವು ಹೇಳಬೇಕು. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಬೇಕು.

**ಅಧ್ಯಕ್ಷರು:** ಮತ್ತೇ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಇರುವುದು ಏತಕ್ಕಾಗಿ ?

**ಶ್ರೀ ಕೆ.ಆರ್. ರಮೇಶ್ ಕುಮಾರ್ :** ರಾಜ್ಯದ ಬಹುಭಾಗದ ಮಕ್ಕಳು ಇವತ್ತಿಗೂ ಕೂಡ ಇಂತಹ ಶಾಲೆಗಳನ್ನೇ ಅವಲಂಬಿಸಿದ್ದಾರೆ. ಅವರ ಕಡೆಗೆ ಗಮನಕೊಡುವುದು ಈ ಸಭೆಯ ಆದ್ಯ ಕರ್ತವ್ಯವಾಗಿದೆ. ನೀವು ಪ್ರಾಥಮಿಕ ಶಿಕ್ಷಣಕ್ಕೆ ರೂಪಿಸಿರುವಂತಹ ನೀತಿ, ನೀವು ಕೊಡುತ್ತಿರುವಂತಹ ಹಣ ಅದು ಏನೇನೂ ಸಾಲದಾಗಿದೆ. ಇದಕ್ಕಾಗಿ ಸುಮಾರು 189 ಕೋಟಿ ರೂಪಾಯಿಗಳ ಬೇಡಿಕೆ ಇದ್ದು ನೀವು 4 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ.

**ಅಧ್ಯಕ್ಷರು :** ನೀವು ಬೇಡಿಕೆಯ ಮೇಲೆ ಚರ್ಚೆ ಬಂದಾಗ ಈ ಬಗ್ಗೆ ತಾವು ವಿಸ್ತೃತವಾಗಿ ಚರ್ಚೆ ಮಾಡಿ.

**ಶ್ರೀ ಕೆ.ಆರ್. ರಮೇಶ್ ಕುಮಾರ್ :** ಮಾನ್ಯ ಅಧ್ಯಕ್ಷರೆ, ನಾನು ಬೇಡಿಕೆಯ ಮೇಲೆ ಚರ್ಚೆ ಬಂದಾಗ ಖಂಡಿತವಾಗಿಯೂ ಮಾತನಾಡುತ್ತೇನೆ. ತಾವು ಹೃದಯವಂತರು ಎಂದು ನಾನು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಈ ಸದನದಲ್ಲಿ ಹಾರಿಕೆ ಉತ್ತರವನ್ನು ಕೊಟ್ಟುಕೊಂಡು ಯಾಂತ್ರಿಕವಾಗಿ ನಾವು ಪ್ರಶ್ನೆಯನ್ನು ಕೇಳುವುದು ಅವರು ಉತ್ತರ ಹೇಳುವುದು ಆಯಿತು ಎಂದರೆ ತಾವು ಮುಂದಿನ ಪ್ರಶ್ನೆಗೆ ಹೋಗುವುದಾದರೆ ನಾನು ತಮಗೆ ತೊಂದರೆಯನ್ನು ಕೊಡುವುದಿಲ್ಲ. ನಾನು ನಿಶಬ್ದವಾಗಿ

ಕುಳಿತುಕೊಳ್ಳುತ್ತೇನೆ. ಆದರೆ ತಾವು ಒಂದು ಸಲ ಯೋಚನೆ ಮಾಡಿ. ಎರಡು ನಿಮಿಷದ ಕೆಳಗಡೆಯೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರು ಕೊಟ್ಟಂತಹ ಉತ್ತರ, ಅದರ ನಂತರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಸಚಿವರು ಶಾಲೆಗಳು ಮುಚ್ಚುವ ಸ್ಥಿತಿಯಲ್ಲಿ ಇಲ್ಲವೆಂದು ಕೊಟ್ಟಿರುವಂತಹ ಉತ್ತರ, ಅಂಗನವಾಡಿ ಶಾಲೆಗಳಿಗೆ ಕಟ್ಟಡ ಇಲ್ಲವಂತೆ ಇಲ್ಲಿ 180 ಕೋಟಿ ರೂಪಾಯಿಗಳನ್ನು ಕೇಳಿದರೆ ಕುಡಿಯುವ ನೀರಿಗೆ ಮತ್ತು ಶೌಚಾಲಯಗಳಿಗೆ 4 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಏತಕ್ಕಾಗಿ ಪುಣ್ಯಕ್ಕೆ Additional Director, Director, Commissioner, Secretary, Under Secretary, Special Secretary, A.E.O, BDO, DDPI ಏತಕ್ಕಾಗಿ ಇವರೆಲ್ಲಾ ಬೇಕು ?

**ಅಧ್ಯಕ್ಷರು:** ಆ ಕಛೇರಿಗಳನ್ನು ಮುಚ್ಚಿ ಬೇಗ,

**ಶ್ರೀ ಕೆ.ಆರ್. ರಮೇಶ್ ಕುಮಾರ್ :** ಅದನ್ನು ಕ್ಲೋಸ್ ಆದರೂ ಮಾಡಬಹುದಲ್ಲಾ ?

(ಗೊಂದಲ)

**ಶ್ರೀ ಆರ್. ಅಶೋಕ್ :** ಮಾನ್ಯ ಅಧ್ಯಕ್ಷರೆ, 180 ಕೋಟಿ ರೂಪಾಯಿಗಳಲ್ಲಿ ಅವರು 4 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂದರೆ ಅವನ್ನು ಯಾವುದಕ್ಕಾಗಿ ವಿನಿಯೋಗಿಸಬೇಕು ?

**ಅಧ್ಯಕ್ಷರು :** ಬಜೆಟ್‌ನಲ್ಲಿ ಎಷ್ಟು ಹಣ ಕೊಟ್ಟಿದ್ದಾರೆ ಅದರ ಮೇಲೆ ಇವರು ಮಾಡುತ್ತಾರೆ.

**ಶ್ರೀ ಆರ್. ಅಶೋಕ್ :** ಅದನ್ನು ಯಾವುದಕ್ಕೆ ವಿನಿಯೋಗಿಸಬೇಕೆಂದು ಹೇಳಬೇಕಲ್ಲವೇ ?

**ಅಧ್ಯಕ್ಷರು:** ನೀವೆಲ್ಲಾ ಮಾಡಿದ್ದರೆ ಅದು ಇಷ್ಟೆಲ್ಲಾ ಏತಕ್ಕಾಗಿ ಉಳಿಯುತ್ತಿತ್ತು ? ನೀವು ಬಿಟ್ಟು ಹೋಗಿರುವದನ್ನು ಅವರು ಮಾಡುತ್ತಿದ್ದಾರೆ.

**ಶ್ರೀ ಕಿಮ್ಮನೆ ರತ್ನಾಕರ್ :** ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಯಲ್ಲಿ ಮೂಲಭೂತ ಸೌಕರ್ಯಗಳಿಗೆ actually demands ನಲ್ಲಿ ಕಡಿಮೆ ಕೊಟ್ಟಿದ್ದರೂ ಕೂಡ ನಂತರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿಗೆ ಹಣವನ್ನು

ಬಿಡುಗಡೆ ಮಾಡಬೇಕೆಂದು ಈ ಬಗ್ಗೆ ಅವರು review meeting ಮಾಡಿ ಈಗ ಹೆಚ್ಚು ಕಡಿಮೆ 40:40 ಲಕ್ಷ ರೂಪಾಯಿಗಳಂತೆ ಪ್ರತಿ ಶಾಸನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳ ಕ್ಷೇತ್ರಕ್ಕೆ ಮೂಲಭೂತ ಸೌಕರ್ಯಕ್ಕೆ ಬೇಕಾದಂತಹದ್ದನ್ನು ಕೊಟ್ಟಿದ್ದೇವೆ.

**ಶ್ರೀ ಕೆ.ಆರ್. ರಮೇಶ್ ಕುಮಾರ್ :** ನೀವು ಶಾಸಕರಿಗೆ 40:40 ಲಕ್ಷ ರೂಪಾಯಿಗಳನ್ನು ನೀವು ಭಕ್ಷೀಸು ಕೊಡುತ್ತೀರಾ ? ಶಾಲೆಗಳು ಎಷ್ಟು ಇದೆ, ಬೇಡಿಕೆಗಳು ಎಷ್ಟು ಇದೆ, ಎಷ್ಟು ಕೊಡುವುದಕ್ಕೆ ಆಗಿದೆ. ಅಷ್ಟನ್ನು ಮಾತ್ರ ತಾವು ಹೇಳಿ ನಿಮ್ಮ demand ಇರುವುದು ನಿಮ್ಮದೆ admission ಪ್ರಕಾರ 189 ಕೋಟಿ ರೂಪಾಯಿಗಳು ಇದೆ.

**ಅಧ್ಯಕ್ಷರು :** ಇದರ ಬಗ್ಗೆ ಬೇಡಿಕೆ ಮೇಲೆ ಚರ್ಚೆ ಬಂದಾಗ ವಿಸ್ತೃತವಾಗಿ ಚರ್ಚೆ ಆದರೆ ಖಂಡಿತವಾಗಿಯೂ ಇದಕ್ಕೆ ಉತ್ತರ ಸಿಗುತ್ತದೆ.

**ಶ್ರೀ ಕೆ. ಆರ್. ರಮೇಶ್ ಕುಮಾರ್ :** ನಮೋ ನಮಃ.

**ಶ್ರೀ ಕಿಮ್ಮನೆ ರತ್ನಾಕರ್ :** ನಮ್ಮಲ್ಲಿ ಇರುವಂತಹ ವ್ಯವಸ್ಥೆಯೊಳಗಡೆ ಎಷ್ಟನ್ನು ಸರಿಮಾಡುವುದಕ್ಕೆ ಸಾಧ್ಯತೆ ಇದೆ ಎಲ್ಲಾ ಪ್ರಯತ್ನವನ್ನು ಮಾಡಿದ್ದೇವೆ. ಕುಡಿಯುವ ನೀರು ಮತ್ತು ಶೌಚಾಲಯದ ಬಗ್ಗೆ ಗ್ರಾಮೀಣಾಭಿವೃದ್ಧಿ ಸಚಿವರೂ ಕೂಡ ನರೇಗಾದಲ್ಲಿ ಪರಿವರ್ತನೆ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಈಗಾಗಲೇ 4 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೂ ಕೂಡ ಇನ್ನು ಹೆಚ್ಚಿನ ಹಣವನ್ನು ಬಿಡುಗಡೆ ನಂತರ ಮಾಡಿರುವುದನ್ನು ಆ ಸದನದ ಎಲ್ಲಾ ಸದಸ್ಯರುಗಳಿಗೂ ಕೂಡ ಪಟ್ಟಣದಲ್ಲಿರುವಂತಹದನ್ನು ಕೂಡ actually 189 ಗ್ರಾಮೀಣ ಶಾಸಕರಿಗೆ ಎಂದು ಯೋಜನೆಯನ್ನು ಮಾಡಿದ್ದೆವು. ಪಟ್ಟಣದಲ್ಲಿರುವುದು ಒಂದು ರೀತಿಯಲ್ಲಿ ಅತಂತ್ರವಾಗಿದೆ. ಕಾರ್ಪೋರೇಷನ್ ಮತ್ತು ನಗರಸಭೆಯ ವ್ಯಾಪ್ತಿಯಲ್ಲಿ ಬರುವಂತಹ ಅದಕ್ಕೂ ಕೂಡ ಅನುಕೂಲವಾಗಲಿ ಎಂದು ಇಡೀ 224 ಸದಸ್ಯರಿಗೂ ಕೂಡ ಮೂಲಭೂತ ಸೌಕರ್ಯಗಳಿಗೆ first time in the history ನಾವು ಮಾಡಿರುವಂತಹದ್ದು ಆಗಿದೆ. 40:40 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ತಕ್ಷಣದಲ್ಲಿ ಏನು ಮಾಡುವುದಕ್ಕಾಗುತ್ತದೆ ಆ ಪ್ರಯತ್ನವನ್ನು ಮಾಡುತ್ತೇವೆ.

**ಅಧ್ಯಕ್ಷರು :** ಮಾನ್ಯ ಜಿ. ಹೆಚ್. ಶ್ರೀನಿವಾಸ್‌ರವರೆ ತಾವು ಪ್ರಶ್ನೆಯನ್ನು ಕೇಳಿ.